ತಾಲ್ಲೂಕಿನ ಜನ ರೋಗರುಜಿನಗಳಿಗೆ ತುತ್ತಾಗಿ ನರಳುತ್ತಿರುವ ಈ ಭಾಗಕ್ಕೆ, ಕೊನೆಯ ಪಕ್ಷ ಹೆಚ್ಚು ಆರೋಗ್ಯ ಘಟಕಗಳನ್ನು ಪ್ರಾರಂಭಿಸುವುದು ಬೇಡ, ಇರುವ ಪ್ರಾಥಮಿಕ ಆರೋಗ್ಯ ಘಟಕಗಳಿಗಾದರೂ ವೈದ್ಯಾಧಿಕಾರಿಗಳನ್ನು ನೇಮಿಸದೆ ಇರುವುದು ಸರ್ಕಾರದ ನಿಷ್ಕ್ರಿಯತೆಗೆ ಉದಾಹರಣೆ ಆಗಿದೆ. ತಕ್ಷಣ ಈ ಸ್ಥಳಗಳಿಗೆ ವೈದ್ಯಾಧಿಕಾರಿಗಳನ್ನು ಇತರೆ ಸಿಬ್ಬಂದಿ ವರ್ಗದವರನ್ನು ನೇಮಿಸಬೇಕೆಂದು ಸಾರ್ವಜನಿಕ ಮಹತ್ವವಾದ ವಿಷಯದ ಬಗ್ಗೆ ಸರ್ಕಾರದ ಹೇಳಿಕೆಯನ್ನು ಬಯಸುತ್ತೇನೆ.

ಅಧ್ಯಕ್ಷರು.—ಇದು ಎಲ್ಲ ಕಡೆಗೂ ಆಗಿದೆ; ಇಡೀ ರಾಜ್ಯದಲ್ಲೇ ಈ ತೊಂದರೆ ಇದೆ.

ಶ್ರೀ ಹೆಚ್ ಎಲ್. ತಿಮ್ಮೇಗೌಡ.—(ಆರೋಗ್ಯ ಮಂತ್ರಿಗಳು) ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕದ್ದು ನಿಜ.

ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕ ವಿಚಾರ ನಿಜವಾದುದು. ಈಗಾಗಲೇ ೩೧೦ ವೈದ್ಯರುಗಳನ್ನು ಲೋಕಲ್ ಕ್ಯಾಂಡಿಡೇಟ್ಸಾಗಿ ತೆಗೆದುಕೊಂಡಿದ್ದರೂ ೨೫೦ ಜನ ವೈದ್ಯರುಗಳ ಕೊರತೆ ಇದೆ. ಈ ವರ್ಷ ೫೬ಳಿ ವೈದ್ಯರುಗಳನ್ನು ತೆಗೆದುಕೊಂಡಿದ್ದೇವೆ ಕಳೆದ ವರ್ಷ ೫೨೭ ಡಾಕ್ಟರುಗಳನ್ನು ನೇಮಕ ಮಾಡಿದ್ದೇವೆ. ೫೬ಳಿ ಜನ ಈ ವರ್ಷ ಏನು ತೆಗೆದುಕೊಂಡಿದ್ದೆವು ಅವರಲ್ಲಿ ಬಹಳ ಜನ ಸ್ನಾತಕೋತ್ತರ ವಿದ್ಯಾಭ್ಯಾಸವನ್ನು ಮಾಡುತ್ತಿದ್ದುದರಿಂದ ೧೮೦ ಜನ ರಿಪೋರ್ಟ್ ಮಾಡಿಕೊಂಡು ಒಂದು ದಿವಸ ಇದ್ದು ವಾಪಸ್ ಪಿ.ಜಿ.ಕೋರ್ಸಿಗೆ ಹೋದರು. ಅವರನ್ನು ಸೆಲೆಕ್ಟ್ ಮಾಡುವಾಗಲೇ ಕೈಬಿಟ್ಟಿದ್ದರೆ ಚೆನ್ನಾಗಿತ್ತು. ೧೮೦ ಜನ ಮಹಿಳಾ ವೈದ್ಯರನ್ನು, ೧೫೦ ಜನ ಪುರುಷ ವೈದ್ಯರನ್ನು ಮತ್ತು ೨೫ ಜನ ಹಲ್ಲಿನ ವೈದ್ಯರನ್ನು ನೇಮಕ ಮಾಡಿಕೊಡುಬೇಕೆಂದು ಪಬ್ಲಿಕ್ ಸರ್ವೀಸ್ ಕಮೀಷನ್ ಅವರನ್ನು ನಾವು ಕೇಳಿದ್ದೇವೆ. ಆದಷ್ಟು ಜಾಗ್ರತೆ ಮಾಡಿಕೊಡುತ್ತೇವೆ ಎಂದು ಅವರು ಹೇಳಿದ್ದಾರೆ. ಮೂರು ಜನ ಡಾಕ್ಟರುಗಳಿರುವ ಕಡೆ ಇಬ್ಬರನ್ನು ಇಟ್ಟು ಇನ್ನೊಬ್ಬರನ್ನು ತೆಗೆದರೆ ೮೦ ಜನ ಸಿಗುತ್ತಾರೆ ಅವರನ್ನು ಉಪಯೋಗಿಸಿಕೊಂಡು ಎಲ್ಲೆಲ್ಲಿ ಖಾಲಿ ಜಾಗ ಇದೆ ಅಲ್ಲಿ ಹಾಕುವುದಕ್ಕೆ ಪ್ರಯತ್ನ ಪಡುತ್ತೇವೆ. ಹದಿನೈದು ದಿವಸಗಳಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ. ಇನ್ನೊಂದು ಯೋಜನೆ ಬಗ್ಗೆ ಮುಖ್ಯಮಂತ್ರಿಗಳ ಜೊತೆ ಮಾತನಾಡಿದ್ದೇನೆ. ಏನೆಂದರೆ ಲೋಕಲ್ ಕ್ಯಾಂಡಿಡೇಟ್ಸ್ ತೆಗೆದುಕೊಂಡರೆ ಅವರನ್ನು ಖಾಯಂ ಮಾಡುವುದಕ್ಕೂ ಆಗುವುದಿಲ್ಲ, ವಾಪಸ್ ಕಳುಹಿಸುವುದಕ್ಕೂ ಆಗುವುದಿಲ್ಲ. ಆದ್ದರಿಂದ ಪಿ.ಎಸ್.ಸಿ.ಯವರು ಕ್ಯಾಂಡಿಡೇಟ್ಸ್ ಸೆಲೆಕ್ಟ್ ಮಾಡಿ ಕಳುಹಿಸುವವರೆಗೆ ನಿವೃತ್ತರಾದ ಡಾಕ್ಟರುಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಯೋಚನೆ ಮಾಡಿದ್ದೇವೆ. ಮೂರು ಜನ ಇರುವ ಕಡೆ ಒಬ್ಬರನ್ನು ತೆಗೆದು ಹಾಕಿದರೆ ಅಲ್ಲಿ ೮೦ ಜನ ಸಿಗುತ್ತಾರೆ. ಆದರೆ ಜೊತೆಗೆ ಮಿಕ್ಕ ಜಾಗಗಳಿಗೆ ನಿವೃತ್ತರಾದ ವೈದ್ಯರುಗಳನ್ನು ೯ ತಿಂಗಳು ಅಥವಾ ಒಂದು ವರ್ಷದ ಅವಧಿಗೆ ಅಂದರೆ ಪಿ.ಎಸ್.ಸಿ.ಯವರು ಡಾಕ್ಟರುಗಳನ್ನು ನೇಮಿಸಿ ಕಳುಹಿಸುವವರೆಗೆ ನೇಮಿಸಿಕೊಳ್ಳುವುದಕ್ಕೆ ಯೋಚನೆ ಮಾಡಿದ್ದೇವೆ.

ಅಧ್ಯಕ್ಷರು.—ಆದಷ್ಟು ಜಾಗ್ರತೆ ಈ ಕೆಲಸ ಮಾಡುತ್ತೇನೆ ಎಂದು ಅಷ್ಯೂರೆನ್ಸ್ ಕೊಡಿ.

ಶ್ರೀ ಎಚ್ ಎಲ್.ತಿಮ್ಮೇಗೌಡ.—ಆದಷ್ಟು ಜಾಗ್ರತೆ ಮಾಡುತ್ತೇವೆ. ಇನ್ನು ೧೦–೧೫ ದಿವಸಗಳಲ್ಲಿ ಮೂರು ಜನ ಇರುವ ಕಡೆ ಒಬ್ಬರನ್ನು ತೆಗೆದು;ಅವರಲ್ಲಿ ಸಿಗುವ ೮೦ ಜನರನ್ನು ನೇಮಕ ಮಾಡುತ್ತೇವೆ. ಆಯುರ್ವೇದ ಆಸ್ಪತ್ರೆಗಳಲ್ಲೂ ವೈದ್ಯರುಗಳ ಕೊರತೆ ಇದೆ. ಅಲ್ಲೂ ಕೂಡ ನೇಮಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಐದು ಜಾಗಗಳಲ್ಲಿ ಡಾಕ್ಟರುಗಳಿಲ್ಲ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅವುಗಳಲ್ಲಿ ಮೂರಕ್ಕಾದರೂ ೧೫ ದಿವಸದೊಳಗೆ ಡಾಕ್ಟರುಗಳನ್ನು ಹಾಕತಕ್ಕ ಭರವಸೆಕೊಡುತ್ತೇನೆ.

ಶಿವಮೊಗ್ಗ ಜಿಲ್ಲೆಯಲ್ಲಿ ಕೆಲವು ರೆವಿನ್ಯೂ ಅಧಿಕಾರಿಗಳು ದಾಖಲೆಗಳನ್ನು ತಿದ್ದಿರುವ ಬಗ್ಗೆ

ಶ್ರೀ ಬಿ.ಸ್ವಾಮಿರಾವ್.—(ಹೊಸನಗರ) ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಆದರಲ್ಲೂ ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಾದ್ಯಂತ ರೆವಿನ್ಯೂ ಅಧಿಕಾರಿಗಳು ದಾಖಲೆಗಳನ್ನು ತಿದ್ದಿ

ಸರಕಾರಕ್ಕೆ ಹಾಗೂ ಸಾರ್ವಜನಿಕರಿಗೆ ಭಾರಿ ಪ್ರಮಾಣದಲ್ಲಿ ಮಾಡಿರುವ ಮೋಸ, ವಂಚನೆಗಳು ಸರ್ಕಾರದವರ ಗಮನಕ್ಕೆ ಅರ್ಜಿಗಳ ಮೂಲಕ ಹಾಗೂ ಪತ್ರಿಕೆಗಳ ಮೂಲಕ ಬಂದಿದ್ದಾಗ್ಯೂ ಸರಕಾರ ಅಥವಾ ಸಬಂಧಪಟ್ಟ ಮಂತ್ರಿಗಳು ಯಾವ ಕ್ರಮವನ್ನೂ ತೆಗೆದು ಕೊಂಡಿರುವುದಿಲ್ಲ. ಉದಾಹರಣೆಗಾಗಿ.—ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು ಖಿಟ್ಟಿಕೊಪ್ಪ ಗ್ರಾಮದ ಕೋಣಂದೂರು ವೃತ್ತಕ್ಕೆ ಸೇರಿದ ಕೆ.ಸಿ.ಕೃಷ್ಣಪ್ಪ ಹೆಗಡೆ-ಗ್ರಾಮಲಿಕ್ಕಿಗ ಮತ್ತು ಶಿವಮೊಗ್ಗ ಜಿಲ್ಲಾ ಹೊಸನಗರ ತಾಲ್ಲೂಕು ಕರೆಹಳ್ಳಿ ಹೋಬಳಿ ನೆವಟೂರು ಗ್ರಾಮ ಲೆಕ್ಕಿಗ ಇವರುಗಳು ದಾಖಲೆ ತಿದ್ದಿ ಪಂಚನೆ ಮಾಡಿರುವರು. ಅಲ್ಲದೆ ಸೊರಬ ತಾಲ್ಲೂಕಿನ ಅನೇಕ ಭಾರಿ ಭೂಮೂಲೀಕರು ಅಧಿಕಾರಿಗಳಿಂದ ದಾಖಲೆ ತಿದ್ದಿಸಿ ೪,೮೦೦ ರೂ.ಗಳಿಗಿಂತ ಕಡಿಮೆ ಆದಾಯ ತೋರಿಸಿ ಭೂಮಿಯ ಪರಿಹಾರವನ್ನು ಪಡೆದಿರುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು ಮತ್ತು ಸಂಸದೀಯವ್ಯವಹಾರಗಳ ಮಂತ್ರಿಯವ ಮಾನ್ಯ ಅಧ್ಯಕ್ಷರೆ, ಅವರ ಹತ್ತಿರ ದಾಖಲೆ ಇದೆ ಎಂದು ಹೇಳುತ್ತಾರೆ. ಅದನ್ನು ಅವರು ಕಳುಹಿಸಿಕೊಡಲಿ. ಯಾರು ತಪ್ಪು ಮಾಡಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಮೈಸೂರಿನ ಶ್ರೀಮತಿ ವಿಜಯಲಕ್ಷ್ಮಿ ಎಂಬ ವಿವಾಹಿತ ಹೆಣ್ಣು ಮಗಳನ್ನು ಬೆಂಕಿಗೆ ಆಹುತಿ ಮಾಡಿರುವ ಬಗ್ಗೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೆ, ನಿನ್ನೆ ನಿಯಮ ೩೫ರ ಪ್ರಕಾರ ನೋಟೀಸ್ ಕೊಟ್ಟಿದ್ದೆ. ಶಿಕ್ಷಣ ಸಚಿವರು ಉತ್ತರ ಕೊಡುತ್ತೇವೆಂದು ಹೇಳಿದ್ದರು. ಆದರೆ ನನ್ನ ಉತ್ತರ ಡೆಲ್ಲಿಗೆ ಹೋಗಿದೆ. ಏನು ಮಾಡುವುದು?

ಶ್ರೀ ಬಿ. ರಾಚಯ್ಯ.—ನಾನು ಯಡಿಯೂರಪ್ಪನವರು ಎತ್ತಿದ ವಿಚಾರಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಭೂಪತಿಯವರೇ ಉತ್ತರ ಓದುತ್ತಿದ್ದಾರೆ, ಸ್ವಲ್ಪ ತಾಳಿ.

ಶ್ರೀ ವಸಂತ ಬಂಗೇರಾ.—ಅದು ಯಡಿಯೂರಪ್ಪನವರು ಹಾಕಿದ್ದಲ್ಲ. ನಾನು ಹಾಕಿದ ಪಶ್ನೆ ಅದು.

ಶ್ರೀ ಬಿ. ರಾಚಯ್ಯ.—ಶಿಕಾರಿಪುರದ್ದಲ್ಲ. ಇದು ಬೇರೆ.

ಅಧ್ಯಕ್ಷರು.—ಭೂಪತಿಯವರು ಅವರ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತಾರೆ.

ಶ್ರೀ ಯು. ಭೂಪತಿ.—ಕೃಷ್ಣನ್ ಅವರ ಪರವಾಗಿ ಕೊಟ್ಟಿದ್ದು ಒಂದಿದೆ. ನನ್ನದೊಂದಿದೆ. ಯಾವುದನ್ನು ಪ್ರಸ್ತಾಪ ಮಾಡಬೇಕೆಂಬುದು ಗೊತ್ತಿಲ್ಲ.

ಅಧ್ಯಕ್ಷರು.—ನಿಮ್ಮದು ಓದಿ. ಮೈಸೂರಿನ ವಿಜಯಲಕ್ಷ್ಮಿ ಎಂಬುವರ ವಿಚಾರ ಹೇಳಿ.

ಶ್ರೀ ಯು. ಭೂಪತಿ.—ಆಯಿತು. ಹೇಳುತ್ತೇನೆ. ಮೈಸೂರಿನ ವಿಜಯಲಕ್ಷ್ಮಿ ಎಂಬ ವಿವಾಹಿತ ಯುವತಿ ದಿನಾಂಕ ೩೦-೮-೮೫ ರಂದು ೧೨-೩೦ ಗಂಟೆಗೆ ಗಂಡನ ಮನೆಯಲ್ಲಿ ದೌರ್ಜನ್ಯಕ್ಕೆ ಬಲಿಯಾಗಿ ಬೆಂಕಿಗೆ ಆಹುತಿಯಾಗಿ ಆಸ್ಪತ್ರೆ ಸೇರಿದ್ದಾಳೆ. ಆಕೆಯ ಗಂಡ, ಅತ್ತೆ, ಇಬ್ಬರೂ ಸೇರಿ ಕಿರುಕುಳ ಕೊಟ್ಟು ಹೊಡೆದು ಬಡಿದು ಒಂದೇ ವರ್ಷದಲ್ಲಿ ಮೂರು ಬಾರಿ ತವರು ಮನೆಗೆ ಓಡಿಸಿ ೭೦೦೦ ರೂ. ಹಣವನ್ನು ವರದಕ್ಷಿಣೆ ಪಡೆದಿದ್ದಾರೆ. ಈಗ ೧೪ಳಿ-ಜಾಕಿ ಕ್ವಾರ್ಟರ್ಸ್, ಮೈಸೂರಿನಲ್ಲಿ ವಾಸ ಮಾಡುತ್ತಿದ್ದು ನಾರಾಯಣ ಸ್ವಾಮಿ ಎನ್ನುವ ಗಂಡ ಮತ್ತು ತಾಯಮ್ಮ ಎನ್ನುವ ಅತ್ತೆ ಅವರೊಂದಿಗೆ ಇದ್ದಳು. ಈಗ ನಾವು ಬದುಕಿನ ಮಧ್ಯೆ ತೂಗುಯ್ಯಾಲೆಯಾಡುತ್ತಿರುವ ವಿಜಯಲಕ್ಷ್ಮಿ ಮದುವೆಯ ಮೊದಲಲ್ಲಿ ೨ ೦೦೦ ರೂ. ನಂತರ ಹಂತಹಂತವಾಗಿ ಕಂತಿನ ರೂಪದಲ್ಲಿ ಒಟ್ಟು ೭,೦೦೦ ರೂಪಾಯಿಗಳನ್ನು ಗಂಡನಿಗೆ ತವರು ಮನೆಯಿಂದ ಹಿಂಸೆ ತಾಳಲಾರದೆ ತಂದುಕೊಟ್ಟಿದ್ದಾಳೆ. ಇನ್ನು ಏನೂ ಕೊಡಲಾಗದ